**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 10834/2021 ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಶ್ರೀಮಂತ |
| ತಂದೆಃ ಗಂಡ | ಃ | ಭೂತಾಳಿ |
| ವಯಸ್ಸು | ಃ | ೬೪ ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | ಃ | ಸಾವಳೇಶ್ವರ |

ದಿನಾಂಕಃ೨೬.೦೪.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಸಹೋದರನ ಪತ್ನಿ, ಚಾಸಾ5 ನನ್ನ ಅಣ್ಣನ ಹೆಂಡತಿ, ಚಾಸಾ-2, 3 ರವರ ಪರಿಚಯ ಇರುತ್ತದೆ.

ಸುಮಾರು 2 ವರ್ಷಗಳ ಹಿಂದೆ ನನ್ನ ಸಹೋದರ ಮನೆಯನ್ನು ಕಟ್ಟುತ್ತಿದ್ದನು, ಆರೋಪಿ ಮತ್ತು ನನ್ನ ತಮ್ಮನ ನಡುವೆ 15 ಇಂಚಿನ ಜಾಗದ ಸಲುವಾಗಿ ತಕರಾರು ಬಂತು, ಆರೋಪಿತರ ತಕರಾರು ಮಾಡಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಿರುತ್ತಾರೆ. ಜಗಳ ಮಾಡಬೇಡಿ ನಾಲ್ಕು ಮಂದಿ ಹಿರಿಯರನ್ನು ಕೂಡಿಸಿ ಜಗಳ ಬಗೆ ಹರಿಸಿಕೊಳ್ಳಿ ಎಂದು ಹೇಳಿದೆನು, ಆಗ ಊರಿನ ಹಿರಿಯರು ಕೂಡಿದರು, ಎಲ್ಲಾ ಹಿರಿಯರು ಸೇರಿ ಸದರಿ ಗೋಡೆಯನ್ನು ಅಳತೆ ಮಾಡಿ ಎಂದು ಹೇಳಿದರು, ಇದು ನನ್ನ ಸಹೋದರನ ಮನೆ ಅಳತೆ ಮಾಡಲು ಬರುವುದಿಲ್ಲ ಎಂದು ಹೇಳಿದೆನು, ಆಗ ಹಿರಿಯರೊಬ್ಬರನ್ನು ನನ್ನ ಜೊತೆ ಕಳಿಸಿ ಅಳತೆ ಮಾಡಿದರು. ಅದು ಒಟ್ಟು 30 ಇಂಚು ಗೋಡೆ ಇದ್ದು, ಇಬ್ಬರು 15 ಇಂಚು 15 ಇಂಚು ತೆಗೆದುಕೊಳ್ಳಿ ಎಂದು ಹೇಳಿದರು. ನಂತರ 5-6 ಫೂಟು ಗೋಡೆ ಆದರ ನಂತರ ಮಾಡ ಬಿಡಲು ತಿಳಿಸಿದರು. ಆಗ ನಾನು ಚಾಸಾ-1 ರವರಿಗೆ ಅವರು ಅಣ್ಣ ತಮ್ಮಂದಿರು ಇದ್ದಾರೆ ಯಾಕೆ ಜಗಳ ಮಾಡುತ್ತೀರಿ ಎಂದು ಸಲಹೆ ನೀಡಿದೆನು. ಅದರಂತೆ ಚಾಸಾ-1 ಯಾವುದೇ ತಕರಾರು ಮಾಡದೇ ಬಿಟ್ಟಿರುತ್ತಾರೆ. ನಂತರ ಸ್ಲಾಬನ್ನು ಮೇಲೆ ಹೇರಲು ಬಿಡಿ ಎಂದು ಸಹ ಈಗ ತಕರಾರು ಮಾಡುತ್ತಿದ್ದಾರೆ. ಕೆಲಸ ಅಷ್ಟಕ್ಕೆ ನಿಂತಿರುತ್ತದೆ. ಪೋಲಿಸರಿಗೆ ಆರೋಪಿಯೇ ಕರೆ ಮಾಡಿ ತಿಳಿಸಿರುತ್ತಾರೆ. ಪೋಲಿಸರು ಸಹ ಕೂಡ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿಕೊಂಡು ಹೋಗಿರುತ್ತಾರೆ.

ನಂತರ ಚಾಸಾ-1 ಮತ್ತು ಆರೋಪಿ ನಂ.೧ ಜಗಳ ಮಾಡುತ್ತಿದ್ದರು, ಅಷ್ಟಕ್ಕೆ ಹೇಳಿ ನಾನು ಬಗೆ ಹರಿಸಿರುತ್ತೇನೆ. ಈ ರೀತಿಯಾಗಿ 3-4 ಸಲ ಜಗಳವಾಗಿರುತ್ತದೆ, 3 ಜನ ಸೇರಿ ಚಾಸಾ-1 ರವರಿಗೆ ಹೊಡೆಯಲು ಹೋಗಿದ್ದರು ಎಂದು ಹೇಳಿರುತ್ತಾರೆ, ಆಗ ನಾನು ಇರಲಿಲ್ಲ. ಆ ಕಾರಣದಿಂದ ಚಾಸಾ-೧ ರವರು ಆರೋಪಿತರ ವಿರುದ್ದ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಆರೋಪಿ ನಂ.೧ ಚಾಸಾ-೧ ರವರಿಗೆ ಕೈಯಿಂದ ಬೆನ್ನ ಮೇಲೆ ಕಪಾಳಕ್ಕೆ ಹೊಡೆದು ಜೀವ ಬೆದರಿಕೆ ಹಾಕಿರುತ್ತಾರೆ ಎಂಧರೆ ಸಾಕ್ಷಿಯು ಹೊಡೆದಿರುತ್ತಾಳೆ ಆದರೆ ಜೀವ ಬೆದರಿಕೆಯನ್ನು ಆರೋಪಿ ನಂ.೧ ರವರ ಮಗ ಹಾಕಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ನಂ.೨ ಸಹ ಚಾಸಾ-೧ ರವರದ್ದು ಬಹಳ ಆಗಿದೆ ಒಂದು ಕೈ ನೋಡಿಕೊಬೇಕು ಎಂದು ಹೇಳಿರುತ್ತಾನೆ ಎಂದರೆ ಸರಿ. ನಾನು ಮತ್ತು ಚಾಸಾ-5 ಜಗಳ ಬಿಡಿಸಿದೆವು ಎಂದರೆ ಸರಿ. ನಾನು ತೋರಿಸಿದ ಜಾಗದಲ್ಲಿ ಪೋಲಿಸರು ಪಂಚನಾಮೆ ಜರುಗಿಸಿರುತ್ತಾರೆ ಎಂಧರೆ ಸರಿ. ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ ದಿ.23.09.2021 ರಂದು ಪೋಲಿಸರು ಪಂಚನಾಮೆ ಜರುಗಿಸಿದರು ಎಂದರೆ ಸರಿ. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರದಲ್ಲಿರುವ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದರಿಂದ ನಿಪಿ-೨ ಎಂದು ಗುರುತಿಸಲಾಯಿತು. ದಿ.24.09.2021 ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ**

ಮೊದಲು ಇದ್ದ ಗೋಡೆ ಹಿರಿಯರ ಕಾಲದಿಂದಲೂ ಇದೆ ಎಂದರೆ ಸರಿ. ಈ ಮೊದಲಿನ ಗೋಡೆ ಸಾಮೂಹಿಕವಾಗಿ ಇರುತ್ತದೆ ಎಂದರೆ ಸರಿ. ಸದರಿ ಗೋಡೆಯನ್ನು ಸಾಮೂಹಿಕವಾಗಿ ಕಟ್ಟಡ ಮಾಡಿರುತ್ತಾರೆ ಎಂಧರೆ ಸಾಕ್ಷಿಯು ಸಾಮೂಹಿಕವಾಗಿ ಕಟ್ಟಲು ಪಾಯ ಹೊಡೆಯಲಾಗಿತ್ತು, ನಂತರ ಚಾಸಾ-೧ 15 ಇಂಚಿನ ಗೋಡೆ ಮಾತ್ರ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕಟ್ಟಡವಾದ ಪೂರ್ತಿ ಗೋಡೆಯ ಮೇಲೆ ಚಾಸಾ-೧ ಸ್ಲಾಬ್ ಹಾಕಲು ರಾಡನ್ನು ಬಿಟ್ಟಿದ್ದರು ಎಂದರೆ ಸಾಕ್ಷಿಯು 15 ಇಂಚು ಗೋಡೆಯ ಮೇಲೆ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ನಮಗೆ ಮುಂದೆ ಕಟ್ಟಡ ಮಾಡಲು ಬರುವುದಿಲ್ಲ, ಆದಕಾರಣದಿಂದ ಅವರಿಗೆ ಸ್ಲಾಬ್ ಹಾಕುವಷ್ಟು ಜಾಗ ಬಿಟ್ಟು ನೀವು ಸ್ಲಾಬ್ ಹಾಕಿಕೊಳ್ಳಿ ಎಂದು ತಕರಾರು ಮಾಡಿರುತ್ತಾರೆ ಎಂಧರೆ ಸರಿ. ತಕರಾರು ಮಾಡಿದ್ದಕ್ಕಾಗಿ ಆರೋಪಿ ನಂ.೧ ಚಾಸಾ-೧ ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಘಟನೆಯು ಗೋಡೆಯ ಮೇಲೆ ನಡೆದಿರುತ್ತದೆ.

ಘಟನೆಯು ಯಾವ ತಾರೀಖಿನಂದು ಆಗಿದೆ ಎಂದು ನನಗೆ ನೆನಪಿಲ್ಲ, ಆದರೆ ಸಾಯಂಕಾಲ 4-00 ರಿಂದ 4.30 ಗಂಟೆಗೆ ಆಗಿರುತ್ತದೆ. ಪೋಲಿಸರಿಗೆ ನಾನು ನನ್ನ ಹೇಳಿಕೆಯಲ್ಲಿ ನಾಲ್ಕು ಜನ ಹಿರಿಯರನ್ನು ಕೂಡಿಸಿ ಗೋಡೆ ತಕರಾರನ್ನು ಬಗೆ ಹರಿಸುವ ಸಮಯದಲ್ಲಿ ನಾಲ್ಕು ಮಂದಿ ಹಿರಿಯರನ್ನು ಕೂಡಿಸಿ ಜಗಳ ಬಗೆ ಹರಿಸಿಕೊಳ್ಳಿ ಎಂದು ಹೇಳಿದೆನು, ಆಗ ಊರಿನ ಹಿರಿಯರು ಕೂಡಿದರು, ಎಲ್ಲಾ ಹಿರಿಯರು ಸೇರಿ ಸದರಿ ಗೋಡೆಯನ್ನು ಅಳತೆ ಮಾಡಿ ಎಂದು ಹೇಳಿದರು, ಇದು ನನ್ನ ಸಹೋದರನ ಮನೆ ಅಳತೆ ಮಾಡಲು ಬರುವುದಿಲ್ಲ ಎಂದು ಹೇಳಿದೆನು ಆದ ಇನ್ನೊಬ್ಬ ಹಿರಿಯನ್ನು ಕಳಿಸಿದರು, ಆಗ ಅಳತೆ ಮಾಡಿದೆನು ಎಂದು ನನ್ನ ಹೇಳಿಕೆಯನ್ನು ಬರೆಸಿರುವುದಿಲ್ಲ ಎಂಧರೆ ಸರಿ. 5-6 ಫೂಟು ಗೋಡೆ ಆದರ ನಂತರ ಮಾಡ ಬಿಡಲು ತಿಳಿಸಿದರು. ಆಗ ನಾನು ಚಾಸಾ-1 ರವರಿಗೆ ಅವರು ಅಣ್ಣ ತಮ್ಮಂದಿರು ಇದ್ದಾರೆ ಯಾಕೆ ಜಗಳ ಮಾಡುತ್ತೀರಿ ಎಂದು ಸಲಹೆ ನೀಡಿದೆನು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

ಪೋಲಿಸರು ನಮ್ಮ ಊರಿಗೆ 3-4 ಸಲ ಬಂದಿರುತ್ತಾರೆ, ಯಾವ ತಾರೀಖು, ಯಾವ ತಿಂಗಳು, ಯಾವ ವರ್ಷ ಎಂದು ನನಗೆ ಹೇಳಲು ಬರುವುದಿಲ್ಲ. ಪೋಲಿಸರು ಘಟನೆ ಆದ ಮರುದಿವಸ ಬಂದಿರುತ್ತಾರೆ. ನಂತರ ಒಂದು ತಿಂಗಳು ಬಿಟ್ಟು ಬಂದಿರುತ್ತಾರೆ. ಘಟನೆ ಆದ ಒಂದು ತಿಂಗಳಾದ 15 ದಿನಗಳ ನಂತರ ಪಂಚನಾಮೆಗೆ ಬಂದಿರುತ್ತಾರೆ. ಪಂಚನಾಮೆ ಕಾಲಕ್ಕೆ ನಾನು, ಚಾಸಾ-2, 3 ಮತ್ತು ಪೋಲಿಸರು ಇದ್ದರು, ಸಾಕ್ಷಿ ಮುಂದುವರೆದು ಪೋಲಿಸರು ನನಗೆ ಕರೆ ಮಾಡಿ ಘಟನಾ ಸ್ಥಳಕ್ಕೆ ಕರೆಸಿದರು, ನಾನು ಚಾಸಾ-2 ಮತ್ತು 3 ರವರನ್ನು ನಾನೇ ಕರೆ ಮಾಡಿ ಕರೆಸಿರುತ್ತೇನೆ. ಪಂಚನಾಮೆ ಕಾಲಕ್ಕೆ ನಾನು, ಚಾಸಾ-2, 3 ಮತ್ತು ಪೋಲಿಸರನ್ನು ಹೊರತುಪಡಿಸಿ ಇನ್ನೂ 8-10 ಜನ ಹೆಣ್ಣು ಮಕ್ಕಳು ಇದ್ದರು. ಪೋಲಿಸರು 3 ರಿಂದ 4 ಗಂಟೆಗೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಘಟನಾ ಸ್ಥಳದ ಚೆಕಬಂದಿ ನನಗೆ ಹೇಳಲು ಬರುತ್ತದೆ, ಪೂರ್ವಕ್ಕೆ ಕಲ್ಲಪ್ಪ ಪಾಳಪ್ಪ ಘೋಡಕೆ ಇವರ ಮನೆ, ಪಶ್ಚಿಮಕ್ಕೆ ಶಿವಶರಣ ಬೂತಾಳಿ ಗೋಡಕೆ, ಉತ್ತರಕ್ಕೆ ಖುಲ್ಲಾ ಜಾಗ, ದಕ್ಷಿಣಕ್ಕೆ ಚಾಸಾ-೧ ರವರ ಮನೆ ಇರುತ್ತದೆ. ಪೋಲಿಸರು ಪಂಚನಾಮೆಯನ್ನು ಜರುಗಿಸಿ ಚಾಸಾ-2 ಮತ್ತು 3 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಪಂಚನಾಮೆ ಕಾಲಕ್ಕೆ ಯಾವುದೇ ಮುದ್ದೇ ಮಾಲುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಪೋಲಿಸರು ಎಷ್ಟು ಸಹಿಗಳನ್ನು ಪಡೆದರು ಎಂದು ನನಗೆ ನೆನಪಿಲ್ಲ. ಪೋಲಿಸರು ಖಾಲಿ ಬಿಳಿಯ ಹಾಳೆಯ ಮೇಲೆ ಸಹಿ ಪಡೆದುಕೊಂಡರಾ ಅಥವಾ ಅದರಲ್ಲಿ ಏನಾದರು ಬರೆದಿತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ನನ್ನ ಹೇಳಿಕೆಯನ್ನು ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಏನು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂಧರೆ ಸರಿ ಅಲ್ಲ.

ಆರೋಪಿತರು ಮತ್ತು ನಮ್ಮ ನಡುವೆ ಗೋಡೆಯ ಸಲುವಾಗಿ ಮೊದಲಿನಿಂದಲೂ ಜಗಳ ಇದೆ ಎಂದರೆ ಸರಿ.

ಧರ್ಮರಾಜ ನನ್ನ ಮಗ, ಅವನಿಗೆ ಈಗ 26 ವರ್ಷ. ನನ್ನ ಮಗ ಧರ್ಮರಾಜ ಆರೋಪಿತರ ಮೊಮ್ಮಗಳನ್ನು ಅತ್ಯಾಚಾರ ಮಾಡಿದ್ದಾನೆ ಎಂದು ಕೇಸು ದಾಖಲಾಗಿ ಈಗ ಜೈಲಿನಲ್ಲಿ ಇರುತ್ತಾನೆ ಎಂದರೆ ಸರಿ. ಆರೋಪಿತರು ನನ್ನ ಮೇಲೂ ಸಹ ಕೂಡ ಒಂದು ಪ್ರಕರಣ ದಾಖಲಿಸಿರುತ್ತಾರೆ ಎಂಧರೆ ಸರಿ. ಅದರ ಸಂಖ್ಯೆ ಸಿ.ಸಿ. ನಂ.6412/2022 ಗುನ್ನೆ ನಂ. 9/2022 ಇರುತ್ತದೆ ಎಂದರೆ ಸರಿ. ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲಿಸಿದ್ದರು ಅದನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಲಿ ಎಂದು ಒತ್ತಾಯ ಹೇರುವ ಸಲುವಾಗಿ ನಾವು ಖೊಟ್ಟಿ ಪ್ರಕರಣವನ್ನು ಅವರ ಮೇಲೆ ದಾಖಲಿಸಿರುತ್ತೇವೆ ಎಂಧರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ನಾವು ಮೊದಲು ಪ್ರಕರಣ ದಾಖಲಿಸಿರುತ್ಥೇವೆ ಎಂದು ನುಡಿಯುತ್ತಾರೆ. ಚಾಸಾ-೧ ನನ್ನ ಸಹೋದರನ ಹೆಂಡತಿ ಆದ ಕಾರಣ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಯಾರನ್ನು ಯಾವತ್ತಿಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ ಅಲ್ಲ.

ಸುಮಾರು 2 ವರ್ಷಗಳ ಹಿಂದೆ ನನ್ನ ಸಹೋದರ ಮನೆಯನ್ನು ಕಟ್ಟುತ್ತಿದ್ದನು, ಆರೋಪಿ ಮತ್ತು ನನ್ನ ತಮ್ಮನ ನಡುವೆ 15 ಇಂಚಿನ ಜಾಗದ ಸಲುವಾಗಿ ತಕರಾರು ಬಂತು, ಆರೋಪಿತರ ತಕರಾರು ಮಾಡಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಜಗಳ ಮಾಡಬೇಡಿ ನಾಲ್ಕು ಮಂದಿ ಹಿರಿಯರನ್ನು ಕೂಡಿಸಿ ಜಗಳ ಬಗೆ ಹರಿಸಿಕೊಳ್ಳಿ ಎಂದು ಹೇಳಿದೆನು,

ಆಗ ಊರಿನ ಹಿರಿಯರು ಕೂಡಿದರು, ಎಲ್ಲಾ ಹಿರಿಯರು ಸೇರಿ ಸದರಿ ಗೋಡೆಯನ್ನು ಅಳತೆ ಮಾಡಿ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ಇದು ನನ್ನ ಸಹೋದರನ ಮನೆ ಅಳತೆ ಮಾಡಲು ಬರುವುದಿಲ್ಲ ಎಂದು ಹೇಳಿದೆನು, ಆಗ ಹಿರಿಯರೊಬ್ಬರನ್ನು ನನ್ನ ಜೊತೆ ಕಳಿಸಿ ಅಳತೆ ಮಾಡಿದರು. ಅದು ಒಟ್ಟು 30 ಇಂಚು ಗೋಡೆ ಇದ್ದು, ಇಬ್ಬರು 15 ಇಂಚು 15 ಇಂಚು ತೆಗೆದುಕೊಳ್ಳಿ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಂತರ 5-6 ಫೂಟು ಗೋಡೆ  ಆದರ ನಂತರ ಮಾಡ ಬಿಡಲು ತಿಳಿಸಿದರು, ಆಗ ನಾನು ಚಾಸಾ-1 ರವರಿಗೆ ಅವರು ಅಣ್ಣ ತಮ್ಮಂದಿರು ಇದ್ದಾರೆ ಯಾಕೆ ಜಗಳ ಮಾಡುತ್ತೀರಿ ಎಂದು ಸಲಹೆ ನೀಡಿದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅದರಂತೆ ಚಾಸಾ-1 ಯಾವುದೇ ತಕರಾರು ಮಾಡದೇ ಬಿಟ್ಟಿರುತ್ತಾರೆ, ನಂತರ ಸ್ಲಾಬನ್ನು ಮೇಲೆ ಹೇರಲು ಬಿಡಿ ಎಂದು ಸಹ ಈಗ ತಕರಾರು ಮಾಡುತ್ತಿದ್ದಾರೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ ಕೆಲಸ ಅಷ್ಟಕ್ಕೆ ನಿಂತಿರುತ್ತದೆ, ಪೋಲಿಸರಿಗೆ ಆರೋಪಿಯೇ ಕರೆ ಮಾಡಿ ತಿಳಿಸಿರುತ್ತಾರೆ. ಪೋಲಿಸರು ಸಹ ಕೂಡ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.  ನಂತರ ಚಾಸಾ-1 ಮತ್ತು ಆರೋಪಿ ನಂ.೧ ಜಗಳ ಮಾಡುತ್ತಿದ್ದರು, ಅಷ್ಟಕ್ಕೆ ಹೇಳಿ ನಾನು ಬಗೆ ಹರಿಸಿರುತ್ತೇನೆ. ಈ ರೀತಿಯಾಗಿ 3-4 ಸಲ ಜಗಳವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ